# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

Website : www.cescmysore.org
U40109KA2004SGC035177
ದೂರವಾಣಿ :
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742

ನಿಗಮ ಕಛೇರಿ, No.927, ಎಲ್.ಜೆ. ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್,
ನ್ಯೂ ಕಾಂತರಾಜ ಅರಸ್ ರಸ್ತೆ, ಸರಸ್ವತಿ ಪುರಂ, ಮೈಸೂರು-570009 CIN
ಸಹಾಯಕ ಕಾರ್ಯ ನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.

ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/17-18/4294-4298 ದಿನಾಂಕ : 26.02.2018

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 15.02.2018 ರಂದು ಬೆಳಿಗ್ಗೆ 11.00 ಗಂಟೆಗೆ **ಅಧೀಕ್ಷಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**<u>ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.</u>**

1. ಶ್ರೀ ನರಸಿಂಹೇಗೌಡ ಎನ್, ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತ, ಮೈಸೂರು
2. ಶ್ರೀ ಸೋಮಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ
3. ಶ್ರೀ ಏಹಸಾನ್ ಉಲ್ಲಾ ಹಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
4. ಶ್ರೀಮತಿ, ನೇತ್ರಾವತಿ.ಕೆ, ಸಹಾಯಕ ಇಂಜಿನಿಯರ್(ತಾಂ),ಎನ್.ಆರ್.ಮೊಹಲ್ಲಾ ಉಪವಿಭಾಗ.
5. ಶ್ರೀ ಶ್ರೀನಿವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
6. ಶ್ರೀ ಗಿರೀಶ್.ವಿ, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
7. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ
8. ಶ್ರೀಮತಿ ಸುನೀತಾ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
9. ಶ್ರೀಮತಿ ಬಿ.ಆರ್.ನಾಗರತ್ನ, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ,ಎನ್.ಆರ್.ಮೊಹಲ್ಲಾ ಉಪವಿಭಾಗ.

ಅಧೀಕ್ಷಕ ಇಂಜಿನಿಯರ್(ವಿ), ರವರು ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿದರು. ದಿನಾಂಕ 14.11.2017 ರಂದು ನಡೆದಿದ್ದ ಜನ ಸಂಪರ್ಕ ಸಭೆಯಲ್ಲಿ ಬಂದಿದ್ದ ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಪಡೆದು ಗ್ರಾಹಕರಿಗೆ ವಿದ್ಯುತ್ ಸಂಬಂಧಿತ ಯಾವುದೇ ದೂರುಗಳು ಇದ್ದರೆ ಈ ಸಭೆಯಲ್ಲಿ ತಿಳಿಸುವಂತೆ ಕೋರಿದರು.

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

1. ಶ್ರೀಮತಿ ಪಕೀರ್ ಹಾಸನಮ್, ನಂ 174, 2ನೇ ಮೇನ್, ಸುಭಾಷ್ ನಗರ ರವರು ತಮ್ಮ ಮನೆಗೆ ಪ್ರತಿ ಮಾಹೆ ಬರುತ್ತಿರುವ ವಿದ್ಯುತ್ ಬಿಲ್ಲಿನಲ್ಲಿ ವ್ಯತ್ಯಸ್ತೆಗಳಿರುತ್ತವೆ. ಬಳಕೆ ಮಾಡುತ್ತಿರುವ ವಿದ್ಯುತ್‌ಗಿಂತ ಮುಪ್ಪಟ್ಟು ವಿದ್ಯುತ್ ಬಿಲ್ಲು ನೀಡಲಾಗುತ್ತದೆ ಎಂದು ದೂರಿದರು. ಈ ಸಂಬಂಧ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಬನ್ನಿಮಂಟಪ ಶಾಖಾಧಿಕಾರಿಯವರಿಗೆ ಸದರಿ ಸ್ಥಾವರದ ಸ್ಥಳ ಪರಿಶೀಲನೆ ಮಾಡಿ ಮಾಪಕವನ್ನು ಪರಿಶೀಲನೆ ಮಾಡುವಂತೆ ಸೂಚಿಸಿದರು.
2. ಶ್ರೀಯುತ ಬಾಬು, ಬೆಲವತ್ತ ಗ್ರಾಮ ರವರು ಬೆಲವತ್ತ ಗ್ರಾಮ ಮಟ್ಟಗಿರಿ ಸುತ್ತಮುತ್ತ Low Voltage ನಿಂದ ವಿದ್ಯುತ್ ಸಮಸ್ಯೆಯಾಗುತ್ತಿರುವುದಾಗಿ ದೂರಿದರು. ಈ ಸಂಬಂಧ ಅಧೀಕ್ಷಕ ಇಂಜಿನಿಯರ್(ವಿ) ರವರು ಹಾಲಿ ಸ್ಥಳದಲ್ಲಿರುವ 25 ಕೆ.ವಿ.ಎ W/s ಪರಿವರ್ತಕವನ್ನು 63 ಕೆ.ವಿ.ಎ ಪರಿವರ್ತಕಕ್ಕೆ ಅಂದಾಜುಪಟ್ಟಿಯನ್ನು ತಯಾರಿಸಿ, ಜೊತೆಗೆ ಹಾಲಿಯಿರುವ ಎಲ್.ಟಿ ಸಿಂಗಲ್ ಫೇಸ್ 3 ವೈರ್‌ಗಳನ್ನು 3 ಫೇಸ್ 5 ವೈರ್‌ಗಳಿಗೆ ಮಾರ್ಪಾಡಿಸಲು ಸ್ಥಳ ಪರಿಶೀಲನೆ ಮಾಡಿ ಅಂದಾಜುಪಟ್ಟಿಯನ್ನು ತುರ್ತಾಗಿ ಸಲ್ಲಿಸುವಂತೆ ಸಿದ್ದಲಿಂಗಪುರ ಇಂಜಿನಿಯರ್ ಶಾಖಾಧಿಕಾರಿಯವರಿಗೆ ತಿಳಿಸಿದರು.
3. ಶ್ರೀ ಬಾಬು, ಬೆಲವತ್ತ ಗ್ರಾಮದವರು ಹಾಲಿ ಬೆಲವತ್ತ ಮುಖ್ಯ ರಸ್ತೆಯಲ್ಲಿರುವ 25 ಕೆ.ವಿ.ಎ ಪರಿವರ್ತಕವನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಿ ಕೊಡಿ ಎಂದು ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜಿನಿಯರ್(ವಿ)ರವರು ಈ ಪರಿವರ್ತಕದಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಿಲ್ಲದಿರುವುದರಿಂದ ಈ ಪರಿವರ್ತಕವನ್ನು ನಿಗಮದ ವತಿಯಿಂದ ಸ್ಥಳಾಂತರಿಸಲು ಸಾಧ್ಯವಿರುವುದಿಲ್ಲ ಎಂದು ದೂರುದಾರರಿಗೆ ಮನವರಿಕೆ ಮಾಡಲಾಯಿತು.
4. ಶ್ರೀ ಬಾಬು ರವರು ಬೆಲವತ್ತ ಗ್ರಾಮದ ಸುತ್ತಮುತ್ತ ಹಲವಾರು ಶಿಥಿಲಗೊಂಡ ವಿದ್ಯುತ್ ಕಂಬಗಳನ್ನು ತುರ್ತಾಗಿ ಬದಲಾಯಿಸಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸುವಂತೆ ಕೋರಿದರು. ಈ ಸಂಬಂಧ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಿದ್ದಲಿಂಗಪುರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿಯನ್ನು ತಯಾರಿಸುವಂತೆ ತಿಳಿಸಿದರು.
5. ಶ್ರೀ ವಾಹಿದ್, ಸುಖ್ ಸಾಗರ್ ಎಲೆಕ್ಟ್ರಿಕಲ್, ವಿದ್ಯುತ್ ಗುತ್ತಿಗೆದಾರರು, ಹಾಲಿ ರಾಜೇಂದ್ರನಗರ, 7ನೇ ಕ್ರಾಸ್‌ನಲ್ಲಿ ಪಾರ್ಕ್ ಹತ್ತಿರ ಶ್ರೀ ಸಿದ್ದಪ್ಪ, ಎಂಬುವರ ಮನೆಯ ಹತ್ತಿರ ಕಳೆದ ಒಂದು ವರ್ಷಗಳಿಂದಲೂ ವಿದ್ಯುತ್ ಕಂಬ ಅಳವಡಿಸಿ ಎಲ್.ಟಿ ಮಾರ್ಗವನ್ನು ಎಳೆಯದೇ ಕೆಲಸವನ್ನು ಬಾಕಿ ಉಳಿಸಿಕೊಂಡಿರುತ್ತಾರೆ. ಈ ಎಲ್.ಟಿ ಮಾರ್ಗದಲ್ಲಿ ತಾಮ್ರದ ತಂತಿಯಿದ್ದು ಯಾವುದೇ ಸಮಯದಲ್ಲಿ ಅಪಾಯ ಉಂಟಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ತುರ್ತಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡಿ ಎಂದು ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜಿನಿಯರ್(ವಿ), ರವರು ಎನ್.ಆರ್.ಮೊಹಲ್ಲಾ, ಶಾಖಾಧಿಕಾರಿಗಳಾದ ಶ್ರೀ ಶ್ರೀನಿವಾಸ ಹಾಗೂ ಶ್ರೀಮತಿ ಸುನೀತಾ ರವರಿಗೆ ಜಂಟಿಯಾಗಿ ಸ್ಥಳಕ್ಕೆ ತೆರಳಿ ಸಂಬಂಧಪಟ್ಟ ಗುತ್ತಿಗೆದಾರರ ಮುಖಾಂತರ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.
6. ಶ್ರೀಯುತ ವಾಹೀದ್, ಸುಖ್ ಸಾಗರ್ ಎಲೆಕ್ಟ್ರಿಕಲ್, ವಿದ್ಯುತ್ ಗುತ್ತಿಗೆದಾರರು,ರವರು ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ನೋಂದಾವಣೆ ಬಗ್ಗೆ ಪ್ರಸ್ತಾಪಿಸಲಾಯಿತು ವಿದ್ಯುತ್ ಮಂಜೂರಾತಿ ಪತ್ರದಲ್ಲಿ 10% ಮೇಲ್ವಿಚಾರಣೆ ವೆಚ್ಚವನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ನೀಡುವಂತೆ ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜಿನಿಯರ್(ವಿ) ರವರ ಸಹಾಯಕ ಇಂಜಿನಿಯರ್(ತಾಂತ್ರಿಕ) ರವರಿಗೆ ನಿಗಮ ಕಛೇರಿಯಲ್ಲಿರುವ ಟ್ರ್ಯಾಕ್ ಲೀಡ್ ಶಾಖೆಯಲ್ಲಿರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶ್ರೀಯುತ ರಘು ರವರಲ್ಲಿ ಚರ್ಚಿಸಿ ಸೂಕ್ತ 10% ಮೇಲ್ವಿಚಾರಣೆ ವೆಚ್ಚವನ್ನು ಪಾವತಿಸಿಕೊಳ್ಳಲು ನಿರ್ದೇಶಿಸಿದರು.

7. ಶ್ರೀ ನಾಗೇಶ್, ಭುವನೇಶ್ವರಿ ಎಲೆಕ್ಟ್ರಿಕಲ್, ರವರು ಸಿದ್ದಲಿಂಗಪುರ ಕಂದಾಯ ಶಾಖೆಯಲ್ಲಿರುವ ಎಲ್ಲಾ ಸಿಬ್ಬಂದಿ ವರ್ಗದವರು ಸೂಕ್ತ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದಿಲ್ಲ. ಹಣ ಪಾವತಿ ಮಾಡಲು ನಗದು ಶಾಖೆಗೆ ಹೋದರೆ ಸ್ಥಳದಲ್ಲಿ ಹಣ ಪಾವತಿಸಿಕೊಳ್ಳಲು ಯಾರು ಇರುವುದಿಲ್ಲ, ಕೇಳಿದರೆ ಇಂದು ರಜೆ ಮಾಡಿದ್ದಾರೆ ಬೇರೆ ಸಿಬ್ಬಂದಿಯನ್ನು ನಿಯೋಜಿಸಿಲ್ಲ ಎಂದು ಕಾರಣ ಹೇಳುತ್ತಾರೆ. ಕೆಲವೊಮ್ಮೆ ನಗದು ಸಹಾಯಕರು ಇದ್ದರೂ ಸಹ 12 ಘಂಟೆಗೆ ಬ್ಯಾಂಕಿಗೆ ತೆರಳಿರುತ್ತಾರೆ. ನಿಗಧಿತ ಸಮಯದಲ್ಲಿ ಕೆಲಸ ನಿರ್ವಹಿಸುತ್ತಿರುವುದಿಲ್ಲ. 30 ಕಿ.ಮೀಗಳಿಂದ ಬಂದಂತಹ ವಿದ್ಯುತ್ ಗ್ರಾಹಕರು/ಗುತ್ತಿಗೆದಾರರು ಇದರಿಂದಾಗಿ ತೊಂದರೆಯನ್ನು ಅನುಭವಿಸಬೇಕಾಗಿರುತ್ತದೆ ಎಂದು ದೂರಿದರು.

8. ಶ್ರೀಮತಿ ಚಾಂದಿನಿ, ಕಾಳಿಸಿದ್ದನ ಹುಂಡಿ,ಮೈಸೂರು, ರವರು ಆರ್.ಆರ್.ಸಂಖ್ಯೆ ಹೆಸರು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಸಹಿಯಲ್ಲಿ ವ್ಯತ್ಯಾಸವಿರುವುದರಿಂದ ಈ ಅರ್ಜಿಯನ್ನು ಹಲವಾರು ಸಮಯಗಳಿಂದ ಬಾಕಿ ಉಳಿಸಿಕೊಂಡಿರುತ್ತಾರೆ. ಸಹಿಯನ್ನು ಮಾಡಲು ಸ್ವಯಂ ಖುದ್ದಾಗಿ ಹೊಳೆನರಸೀಪುರದಿಂದ ನಾನೇ ನೇರವಾಗಿ ಕಛೇರಿಗೆ ಬಂದರೂ ಸಹ ಸರಿಯಾಗಿ ಸ್ಪಂದಿಸಿರುವುದಿಲ್ಲ. ಹಿರಿಯ ಸಹಾಯಕ ಹಾಗೂ ಇನ್ನಿತರ ಕಂದಾಯ ಸಿಬ್ಬಂದಿಯವರು ನಿರ್ಲಕ್ಷತೆಯನ್ನು ಪ್ರದರ್ಶಿಸಿರುತ್ತಾರೆ ಎಂದು ದೂರಿದರು.

27/2/2018

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಎನ್.ಆರ್.ಮೊಹಲ್ಲಾ ಉಪ-ವಿಭಾಗ
ಚಾ.ವಿ.ಸ.ನಿ.ನಿ. ಮೈಸೂರು.

ಪ್ರತಿಗಳು:-

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಚಾವಿಸನಿನಿ., ಎನ್.ಆರ್.ಮೊಹಲ್ಲಾ, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ಬನ್ನಿಮಂಟಪ/ಬೆಲ್ಲಹಳ್ಳಿ/ಸಿದ್ದಲಿಂಗಪುರ, ರವರುಗಳು ಮೇಲ್ಕಂಡ ದೂರುಗಳನ್ನು ಸ್ಥಳ ಪರಿಶೀಲಿಸಿ ಉಪವಿಭಾಗ ಕಛೇರಿಗೆ ವರದಿ ನೀಡುವುದು.
- ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.